ನೆನಪಿಲ್ಲವಲ್ಲ? ಅದಕ್ಕೆ ಇಂತಹ ಶಿಕ್ಷೆಯನ್ನು ಅನುಭವಿಸಬೇಕೆ? ಆದರೆ 'ಹಿಂದೆ ಮಾಡಿದ ಒಳ್ಳೆಯ ಕರ್ಮಗಳ ಫಲವೂ ಅದೇರೀತಿ ಬಂದಾಗ ಅದನ್ನು ತಿರಸ್ಕರಿಸುತ್ತೀರಾ?' ಎಂದು ಕೇಳಿದರೆ ಅದಕ್ಕೆ ಉತ್ತರವಿಲ್ಲ.

*ಆನಂದ ರಾಮಾಯಣ*ದಲ್ಲಿ ಉಲ್ಲೇಖವಾಗಿರುವ ಕಥೆ ಇಲ್ಲಿ ಮನನಯೋಗ್ಯ. ಶ್ರೀರಾಮಚಂದ್ರನ ದರ್ಬಾರ್ ನಡೆಯುತ್ತಿತ್ತು. ಆಗ ಜೋರಾಗಿ ಗಂಟೆ ಸದ್ದು ಕೇಳಿಸಿತು. ಆಗಿನ ಕಾಲದ ನಿಯಮದಂತೆ ಯಾರಿಗಾದರೂ ಅನ್ಯಾಯವಾದರೆ, ಗಂಟೆ ಬಾರಿಸುವುದರ ಮೂಲಕ ರಾಜನ ಬಳಿ ನ್ಯಾಯ ಕೇಳುವ ವ್ಯವಸ್ಥೆಯಿತ್ತು. ಶ್ರೀರಾಮಚಂದ್ರ ತಕ್ಷಣ ದರ್ಬಾರ್ ನಿಲ್ಲಿಸಿ ಗಂಟೆ ಬಾರಿಸಿದವನನ್ನು ಕರೆತರಲು ಆದೇಶ ನೀಡಿದ. ಭಟರು ಹೋಗಿ ನೋಡಿದಾಗ ಒಂದು ನಾಯಿ ಗಂಟೆಯ ಕೆಳಗೆ ನಿಂತಿತ್ತು. ಅದನ್ನು ಕರೆತಂದು ರಾಜನ ಮುಂದೆ ನಿಲ್ಲಿಸಲಾಯಿತು. ಶ್ರೀರಾಮ ಕೇಳಿದ, ''ಏನಾಯಿತು?'' ಅದಕ್ಕೆ ಉತ್ತರವಾಗಿ ಆ ನಾಯಿ ಹೇಳಿತು, ''ನಾನು ರಸ್ತೆಯ ಬದಿಯಲ್ಲಿ ಬಿದ್ದಿದ್ದ ಆಹಾರವನ್ನು ಸೇವಿಸುತ್ತಿದ್ದಾಗ ಒಬ್ಬ ಮನುಷ್ಯ ನನ್ನನ್ನು ಹೊಡೆದ. ನನ್ನದೇನೂ ತಪ್ಪಿಲ್ಲ. ನನಗೆ ನ್ಯಾಯ ಬೇಕು.'' ಶ್ರೀರಾಮ ಆ ಮನುಷ್ಯನನ್ನು ಕರೆತರಲು ಆಜ್ಞಾಪಿಸಿದ. ಕೂಡಲೇ ಅವನನ್ನು ಕರೆತರಲಾಯಿತು. ಆ ಮನುಷ್ಯ ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡ. ಈಗ ಶ್ರೀರಾಮಚಂದ್ರ ತಾನು ತೀರ್ಪು ನೀಡುವ ಬದಲು, ಆ ನಾಯಿಯನ್ನೇ ತಕ್ಕ ಶಿಕ್ಷೆ ವಿಧಿಸಲು ನಿರ್ದೇಶಿಸಿದ. ಅದಕ್ಕೆ ನಾಯಿ ಹೇಳಿತು: ''ಇವನನ್ನು ಯಾವುದಾದರೂ ದೇವಸ್ಥಾನದ ಆಡಳಿತಾಧಿಕಾರಿಯನ್ನಾಗಿ ಮಾಡಿ.'' ಈ ಮಾತನ್ನು ಕೇಳಿ ಶ್ರೀರಾಮನಿಗೆ ಆಶ್ಚರ್ಯವಾಯಿತು. ''ನಿನ್ನನ್ನು ವಿನಾಕಾರಣ ನೋಯಿಸಿದವನಿಗೆ ಆಡಳಿತಾಧಿಕಾರಿಯ ಹುದ್ದೆ ನೀಡಬೇಕೆ?'' ಎಂದ. ಅವನಿಗೆ ಇದರಲ್ಲೇನೋ ಗೂಢಾರ್ಥವಿದೆ ಎಂದು ತಿಳಿಯಿತು. ಅದೇನೆಂದು ಆ ನಾಯಿಯನ್ನೇ ಅವನು ಕೇಳಿದ. ಅದಕ್ಕೆ ಆ ನಾಯಿ ಹೇಳಿತು, ''ನಾನು ನನ್ನ ಹಿಂದಿನ ಜನ್ಮದಲ್ಲಿ ಒಂದು ದೇವಸ್ಥಾನದ ಆಡಳಿತಾಧಿಕಾರಿಯಾಗಿದ್ದೆ. ಯಾರಿಗೂ ಸಂಶಯ ಬರದಂತೆ ಅವ್ಯವಹಾರದಲ್ಲಿ ನಿರತನಾಗಿ, ಕಾನೂನಿನಿಂದ ತಪ್ಪಿಸಿಕೊಂಡೆ. ಆದರೆ ನಾನು ಮಾಡಿದ ಕರ್ಮಫಲದಿಂದ ಮಾತ್ರ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನನಗೆ ಈಗ ಈ ನೀಚ ಜನ್ಮ ಬಂದಿದೆ. ಆದ್ದರಿಂದ ಇವನಿಗೆ ಆ ಹುದ್ದೆ ನೀಡಲು ವಿನಂತಿಸಿಕೊಂಡೆ'' ಎಂದಿತು. ಈ ಮಾತನ್ನು ಕೇಳಿ ಶ್ರೀರಾಮಚಂದ್ರನಿಗೆ ಆ ಪ್ರಾಣಿಯ ಮೇಲೆ ಕನಿಕರವುಂಟಾದರೂ, ಕರ್ಮದ ಗತಿಯನ್ನು ತಪ್ಪಿಸಲಾಗಲಿಲ್ಲ. ಅನೇಕ ಮಂದಿ ಸಜ್ಜನರು ಪದೇ ಪದೇ ದುಃಖಕ್ಕೆ ಈಡಾಗುವುದನ್ನು ನಾವು ನೋಡುತ್ತೇವೆ. ಹೀಗೇಕಾಯಿತು ಎಂದು ಯೋಚಿಸಿದಾಗ, ಅದಕ್ಕೆ ಹಿಂದೆ ಮಾಡಿದ ಕರ್ಮದ ಫಲವೇ ಕಾರಣ ಎಂದೇ ನಿಸ್ಸಂದೇಹವಾಗಿ ಹೇಳಬಹುದು. 'ಬಿತ್ತಿದಂತೆ ಬೆಳೆ ಸುಳ್ಳಲ್ಲ' ಎಂಬ ಮಾತುಸತ್ಯ. ಆದ್ದರಿಂದ ಕರ್ಮ ಮಾಡುವಾಗ ಅದರ ದುಷ್ಪರಿಣಾಮಗಳನ್ನು ಒಮ್ಮೆ ಅವಲೋಕಿಸಿ ಮಾಡಿದರೆ ಒಳಿತು. ಇಲ್ಲದಿದ್ದರೆ ಗೋಡೆಗೆ ಬಡಿದ ಚೆಂಡಿನಂತೆ ಅದು ನಮಗೇ ಹಿಂದಿರುಗುವುದು ಖಂಡಿತ. ಸತ್ಕರ್ಮದಿಂದ ಸತ್ಫಲ; ಅದೇ ರೀತಿ ದುಷ್ಕರ್ಮದಿಂದ ದುಷ್ಫಲ.

ಏನೇ ಆಗಲಿ, ಭಗವಂತನ ನಾಮಸ್ಮರಣೆಯಿಂದ ನಾವು ಹಿಂದೆ ಮಾಡಿರುವ, ಈಗ ಮಾಡುತ್ತಿರುವ, ಮುಂದೆ ಜನ್ಮವೆತ್ತಿ ಮಾಡುವ ಎಲ್ಲಾ ಕರ್ಮಗಳ ಪ್ರಭಾವವನ್ನು ಕಡಿಮೆ ಮಾಡಿಕೊಳ್ಳಬಹುದು. ಆದರೆ ಅವುಗಳ ಫಲವನ್ನು ಸ್ವಲ್ಪವಾದರೂ ಅನುಭವಿಸದೆ ಅದರಿಂದ ಮುಕ್ತಿ ಹೊಂದಲು ಸಾಧ್ಯವಿಲ್ಲ. ಆದ್ದರಿಂದಲೇ ಶ್ರೀರಾಮಕೃಷ್ಣ ಪರಮಹಂಸರು ಪದೇ ಪದೇ ನಾಮಸ್ಮರಣೆಯ ಬಗ್ಗೆ ಹೇಳುತ್ತ, ಅದು ಅತಿ ಸುಲಭ ಮತ್ತು ಅತ್ಯಂತ ಪರಿಣಾಮಕಾರಿ ಎಂದು ಹೇಳಿದ್ದಾರೆ. ಭವಿಷ್ಯವನ್ನು ಕುರಿತು ನಾವು ಅಜ್ಞಾನಿಗಳಾಗಿರುವುದರಿಂದ ಮುಂದಿನ ಕ್ಷಣ ಏನಾಗುವುದೋ ನಮಗೆ ತಿಳಿಯದು. ಆದ್ದರಿಂದ ನಾಮಜಪ ಮತ್ತು ಪ್ರಾರ್ಥನೆ – ಇದೊಂದೇ ನಮ್ಮ ಪಾಲಿಗಿರುವ ಮಾರ್ಗ ಎಂದು ನಿಸ್ಸಂದೇಹವಾಗಿ ಹೇಳಬಹುದು. ಇದಕ್ಕೆ ಅನೇಕ ಮಂದಿ ಮಹಾಪುರುಷರ ಜೀವನವೇ ಆಧಾರವಾಗಿದೆ. *

## ಶ್ರೀಮಾತೆಯವರ ಉಪದೇಶಗಳು



❁ ಯಾವಾಗಲೂ ಕೆಲಸ ಮಾಡಬೇಕು. ಕೆಲಸದಿಂದ ದೇಹ, ಮನಸ್ಸುಗಳು ಸುಸ್ಥಿತಿಯಲ್ಲಿರುತ್ತವೆ.

❁ ಗುರುಭಕ್ತಿ ಇರುವುದು ಒಳ್ಳೆಯದು. ಗುರು ಎಂಥವನೇ ಆಗಿರಲಿ, ಅವನ ಮೇಲೆ ಭಕ್ತಿ ಇದ್ದರೆ ಮಾತ್ರ ಮುಕ್ತಿ. ಶ್ರೀರಾಮಕೃಷ್ಣರ ಭಕ್ತರಿಗೆ ಅವರ ಮೇಲೆ ಎಂತಹ ಭಕ್ತಿ ನೋಡು – ಇಂತಹ ಗುರುಭಕ್ತಿಯಿಂದಾಗಿಯೇ ಅವರು ಗುರುವಿನ ವಂಶದವರನ್ನೆಲ್ಲ ಭಕ್ತಿಯಿಂದ ಕಾಣುತ್ತಾರೆ. ಅಷ್ಟೇ ಅಲ್ಲ, ಗುರುವಿನ ಊರಿಗೆ ಸೇರಿದ ಬೆಕ್ಕನ್ನೂ ಕೂಡ ಗೌರವಿಸುತ್ತಾರೆ.

❁ ಕೆಲಸ ಮಾಡಲೇಬೇಕು. ಅದರಲ್ಲೇನಂತೆ? ಕೆಲಸ ಮಾಡುತ್ತಲೇ ಕರ್ಮಬಂಧನ ಕಳಚಿ ಹೋಗಬೇಕು. ಆಗಲೇ ನಿಷ್ಕಾಮ ಭಾವನೆ ಬರುವುದು. ಒಂದು ಕ್ಷಣ ಕೂಡ ಕೆಲಸ ಮಾಡದೆ ಇರುವುದು ಒಳ್ಳೆಯದಲ್ಲ.

❁ ಅನಾದಿಕಾಲದಿಂದ ಎಷ್ಟೊಂದು ಮಂದಿ ಮೂರ್ತಿಪೂಜೆಯ ಮೂಲಕ ಸಾಧನೆ ಮಾಡಿ ಮುಕ್ತಿ ಹೊಂದಿದ್ದಾರೆ! ಅದೆಲ್ಲ ಸುಳ್ಳೆ? ನಮ್ಮ ಗುರುಮಹಾರಾಜರಿಗೆ ಇಂಥ ಸಂಕುಚಿತ ಬುದ್ಧಿ ಇರಲಿಲ್ಲ. ಬ್ರಹ್ಮ ಎಲ್ಲ ವಸ್ತುಗಳಲ್ಲೂ ಇದ್ದಾನೆ. ಸಾಧುಸಂತರು ಜನರಿಗೆ ದಾರಿ ತೋರಿಸಲು ಅಂತಲೇ ಬರುತ್ತಾರೆ. ಅವರಲ್ಲಿ ಒಬ್ಬೊಬ್ಬರು ಒಂದು ರೀತಿ ಉಪದೇಶ ಮಾಡುತ್ತಾರೆ. ಮಾರ್ಗಗಳು ಅನೇಕ ಬಗೆಯವು, ಆದ್ದರಿಂದ ಅವರೆಲ್ಲರ ಉಪದೇಶಗಳೂ ಸತ್ಯ.

ಶ್ರೀಶಾರದಾದೇವಿ ವಚನವೇದದಿಂದ



# ಮನಸ್ಸೆಂಬುದು ಮಾಹಿತಿಗಳ ಕಣಜವಲ್ಲ, ಅದೊಂದು ಜಾಗೃತಗೊಳಿಸುವ ಶಕ್ತಿ

ಸುದರ್ಶನ ಭಟ್ಟ, ಮೆಣಸೆ

ಲೌಕಿಕ ಜೀವನದಲ್ಲಿ ಹೇಗೋ, ಆಧ್ಯಾತ್ಮಿಕ ಜೀವನದಲ್ಲೂ ಮನಸ್ಸಿನ ಕಾರ್ಯ ಅತ್ಯಂತ ಮುಖ್ಯವಾದುದು. ಉತ್ತಮ ವಿದ್ಯಾಭ್ಯಾಸಕ್ಕಾಗಲಿ, ಉನ್ನತ ಜೀವನ ನಡೆಸುವುದಕ್ಕಾಗಲಿ ಮನಸ್ಸನ್ನು ಆರೋಗ್ಯಕರವಾದ, ಸುಸಂಸ್ಕೃತವಾದ ರೀತಿಯಲ್ಲಿ ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ ಎಂದು ತಿಳಿಸಿಕೊಡುವ ಲೇಖಕರು, ಶೃಂಗೇರಿಯಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಯಾಗಿದ್ದಾರೆ.

ಈ ಸೃಷ್ಟಿಯಲ್ಲಿ ೮೪ ಲಕ್ಷಕೋಟಿ ಜೀವ ಜಂತುಗಳಿವೆ. ಆ ಜೀವಿಗಳಲ್ಲಿ ಅತ್ಯಂತ ಶ್ರೇಷ್ಠನಾದವನು ಮಾನವ. ಹಾಗಾಗಿ ದಾಸರು 'ಮಾನವ ಜನ್ಮ ದೊಡ್ಡದು' ಎಂಬುದಾಗಿ ಹೇಳಿದ್ದಾರೆ. ಆಚಾರ್ಯ ಶಂಕರರು **'ಜಂತೂನಾಂ ನರಜನ್ಮ ದುರ್ಲಭಂ'** ಎಂದು ಮಾನವ ಜನ್ಮದ ಶ್ರೇಷ್ಠತೆ ಮತ್ತು ಉದ್ದೇಶವನ್ನು ಅತ್ಯಂತ ಮನೋಜ್ಞವಾಗಿ ನಿರೂಪಿಸಿದ್ದಾರೆ. ಈ ರೀತಿಯಲ್ಲಿ ಮಾನವ ಜನ್ಮದ ಶ್ರೇಷ್ಠತೆಯನ್ನು ದಾರ್ಶನಿಕರು ಬಹುವಾಗಿ ವರ್ಣಿಸಿದ್ದಾರೆ. ಹಾಗಾದರೆ ಏನಿರಬಹುದು ಈ ಶ್ರೇಷ್ಠತೆ ಎಂದು ವಿಚಾರ ಮಾಡುತ್ತಾ ಹೊರಟರೆ ನಮಗೆ ದೊರೆಯುವ ಉತ್ತರವೆಂದರೆ ಅದೇ – ವಿವೇಚನಾ ಶಕ್ತಿ, ಆಲೋಚನಾ ಸಾಮರ್ಥ್ಯ. ಅದೆಲ್ಲಕ್ಕಿಂತಲೂ ಹೆಚ್ಚಾಗಿ, **'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ'** ಎನ್ನುವ ಉಕ್ತಿ, ಹಾಗೂ ಯೋಗವಾಸಿಷ್ಠದ **'ಮಾನಸಂ ವಿದ್ಧಿ ಮಾನವಂ'** ಎನ್ನುವ ಒಂದು ಉಕ್ತಿ ಇವು ಎಲ್ಲ ಕ್ರಿಯೆಗಳ ಮೂಲಸ್ಥಾನವಾಗಿರುವಂತಹ ಮನಸ್ಸಿನ ಬಗ್ಗೆ ಬೆಳಕನ್ನು ಚೆಲ್ಲುತ್ತವೆ. ಶಾಸ್ತ್ರದಲ್ಲಿ ಹೇಳಿದಂತೆ ಅಂತಃಕರಣದ ವಿಧಗಳಲ್ಲಿ ಮನಸ್ಸೂ ಒಂದು. ಹೀಗೆ ಮಾನವನ ಜೀವನದಲ್ಲಿ ಮನಸ್ಸಿನ ಸ್ಥಾನ ಚಮತ್ಕಾರದಿಂದ ಕೂಡಿದ್ದಾಗಿ, ಅದ್ಭುತವಾಗಿ ತೋರಿ ಬರುತ್ತದೆ.

ಆದರೆ ೨೧ ನೇ ಶತಮಾನದ ವಿಜ್ಞಾನ, ತಂತ್ರಜ್ಞಾನ, ಜಾಗತೀಕರಣದ, ಸ್ಪರ್ಧಾತ್ಮಕವಾದ ಈ ಸಂದರ್ಭದಲ್ಲಿ ಭೌತಿಕ ಪ್ರಪಂಚಕ್ಕೆ, ಇಂದ್ರಿಯಗಳ ಲಾಲಸೆಗೆ ಸಿಕ್ಕಿ ಮನಸ್ಸಿನ ಅತ್ಯದ್ಭುತ ಶಕ್ತಿಯನ್ನು ನಾವು ಮರೆತಿದ್ದೇವೆ. ಯೋಚನೆ ಮಾಡಿ! ಆಕಾಶದಲ್ಲಿ ಹಾರುವುದನ್ನು, ನೀರಿನಲ್ಲಿ ಈಜುವುದನ್ನು, ಜೊತಗೆ ಅಲ್ಲೆಲ್ಲ ಪ್ರಯಾಣಕ್ಕೆ ಬೇಕಾದಂತಹ ಸಾಧನವನ್ನು ಬಳಸುತ್ತಿರುವೆವು. ಇಷ್ಟೇ ಅಲ್ಲದೆ, ವಾಯುಮಾರ್ಗ, ವಾಯುಯಾನ ಮತ್ತು ಅನ್ಯಗ್ರಹದ ಅನ್ವೇಷಣೆ ಮುಂತಾದ ಜಗತ್ತಿನ ಅದ್ಭುತಗಳನ್ನು ಅನ್ವೇಷಿಸಿದ್ದು ಯಾರು? ಯಾವುದು? ಎಂದು ಪ್ರಶ್ನಿಸಹೊರಟರೆ ನಮಗೆ ದೊರೆಯುವ ಪ್ರಾಮಾಣಿಕ ಉತ್ತರವೆಂದರೆ ಅದೇ – ಬುದ್ಧಿಯ ಸ್ನೇಹಿತನಾದ ಮನಸ್ಸು. ಕೈಗೆ ಸಿಲುಕದ, ಕಣ್ಣಿಗೆ ಕಾಣದ, ಆದರೂ ನಮ್ಮಲ್ಲೇ ದೊರೆಯುವ ವಿಶಿಷ್ಟ ಶಕ್ತಿಯಾಗಿದೆ, ಮನಸ್ಸು. ಈ ಎಲ್ಲ ವಿಶಿಷ್ಟ ಗುಣಗಳಿರುವ ಮನಸ್ಸನ್ನು ಎಲ್ಲೋ ಒಂದು ಕಡೆ ನಾವು ಮರೆಯುತ್ತಿದ್ದೇವೆ. ನಾವು ಕಂಡುಹಿಡಿದ ಸಾಧನಗಳಿಂದ ಕಂಪ್ಯೂಟರ್, ಅಂತರ್ಜಾಲ, ಇವುಗಳಿಂದ ನಮ್ಮ ಶಕ್ತಿಯನ್ನು ನಾವು ಮರೆಯುತ್ತಿದ್ದೇವೆ. ಮನಸ್ಸನ್ನು ಮರೆತು ಆ ಸ್ಥಾನದಲ್ಲಿ ಜಡವಸ್ತುಗಳಾದ ದೂರದರ್ಶನ, ದೂರವಾಣಿಗಳನ್ನು ಪ್ರತಿಷ್ಠಾಪಿಸುತ್ತಿದ್ದೇವೆ. ಸರಿ, ಇದಕ್ಕೆಲ್ಲ ಮೂಲ ಕಾರಣವೇನಿರಬಹುದು ಎಂಬ ಜಿಜ್ಞಾಸೆಗೆ ಮನಸ್ಸು ಮಾಡಿದರೆ ಥಟ್ಟನೆ ಸಿಗುವ ಉತ್ತರವೆಂದರೆ, ಎಲ್ಲದಕ್ಕೂ ಮೂಲಾಧಾರವಾದ ಶಿಕ್ಷಣಕ್ಷೇತ್ರ. ಇಂದಿನ ಶಿಕ್ಷಣ ಪದ್ಧತಿ ಆಂಗ್ಲರಿಂದ ಎರವಲು ಪಡೆದಂತಹ, ನಮ್ಮನ್ನು ಸಕಲ ಸಂಸ್ಕಾರಗಳ ಗಣಿಯಿಂದ ದೂರಮಾಡಿ ಗುಲಾಮರನ್ನಾಗಿಸುವ ಸಾಧನವಾಗಿ ತೋರಿಬರುತ್ತದೆ. ನಮ್ಮ ಮಾನಸಿಕ ಶಕ್ತಿಯನ್ನು ಕುಗ್ಗಿಸುವ ಅದೆಷ್ಟೋ ವಿಕಾರಗಳು ಇಂದು ಪವಿತ್ರ ವಿದ್ಯಾಕ್ಷೇತ್ರದಲ್ಲಿ ಬೇರೂರಿವೆ. ಸಮಾಜದಲ್ಲಿನ ಭಯೋತ್ಪಾದನೆ, ಅತ್ಯಾಚಾರ, ಕೊಳ್ಳುಬಾಕುತನದಂತಹ ಮೃಗೀಯ ಗುಣಗಳು ತನ್ನ ರುದ್ರನರ್ತನವನ್ನು ಮಾಡುತ್ತಿವೆ. ಇದಕ್ಕೆಲ್ಲ ಪ್ರಮುಖ ಕಾರಣ ಮನಸ್ಸನ್ನು ಮಾಹಿತಿಯ ಕಣಜದಂತೆ ನೋಡುತ್ತಿರುವುದು. ಈ ವಿಚಾರಗಳ ಜೊತೆಗೆ ಎಲ್ಲರೂ ಸುಖದ ದಾಸರಾಗಿ, ಶಾರೀರಿಕ, ಮಾನಸಿಕ ಸ್ವಾಸ್ಥ್ಯವನ್ನು ಕೆಡಿಸಿಕೊಳ್ಳುತ್ತಾ ಅರ್ಥಹೀನ ಬದುಕನ್ನು